RNI No. KARBIL/2001/47147

# ಕರ್ನಾಟಕ ಸರ್ಕಾರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ



| ಭಾಗ–I | ಬೆಂಗಳೂರು, ಶನಿವಾರ, ಡಿಸೆಂಬರ್ ೧, ೨೦೧೮ (ಮಾರ್ಗಶಿರ ೧೦, ಶಕ ವರ್ಷ ೧೯೪೦) | ನಂ. ೧೪೭೭ |
|---|---|---|
| Part–I | Bengaluru, Saturday, December 1, 2018 (Margasira 10, Shaka Varsha 1940) | No.1477 |



**ಕರ್ನಾಟಕ ಸರ್ಕಾರದ ನಡವಳಿಗಳು**

**ಸಂಸದೀಯ ವ್ಯವಹಾರಗಳ ಸಚಿವಾಲಯ**

**ವಿಷಯ:** ಅಸ್ವಾಭಾವಿಕವಾಗಿ ಮರಣ ಹೊಂದಿದ ವಿಧಾನ ಸಭೆಯ ಶಾಸಕರಾದ ದಿವಂಗತ॥ ಸಿದ್ದು ನ್ಯಾಮಗೌಡ ಇವರ ಕುಟುಂಬದವರಿಗೆ ಪರಿಹಾರ ಧನವನ್ನು ನೀಡುವ ಬಗ್ಗೆ.

**ಓದಲಾಗಿದೆ:** (1) ಸರ್ಕಾರದ ಆದೇಶ ಸಂಖ್ಯೆ: ಸಂವ್ಯಶಾಇ 04 ಸಂವ್ಯವಿ 97, ದಿ: 29.07.97
(2) ಸರ್ಕಾರದ ಆದೇಶ ಸಂಖ್ಯೆ: ಸಂವ್ಯಶಾಇ 07 ಸಂವ್ಯವಿ 2018, ದಿ: 10.09.2018

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ದಿನಾಂಕ: 1.10.1994ರ ನಂತರ ಸಂಭವಿಸಿದ ಕರ್ನಾಟಕ ವಿಧಾನ ಸಭಾ ಸದಸ್ಯರು, ವಿಧಾನ ಪರಿಷತ್ತಿನ ಸದಸ್ಯರು ಮತ್ತು ಕರ್ನಾಟಕದಿಂದ ಚುನಾಯಿತರಾದ ಸಂಸತ್ ಸದಸ್ಯರುಗಳ ಅಸ್ವಾಭಾವಿಕ ಮರಣಗಳ ಸಂದರ್ಭದಲ್ಲಿ ರೂ. 5.00 ಲಕ್ಷ ರೂಪಾಯಿಗಳ ಪರಿಹಾರವನ್ನು ಮಂಜೂರು ಮಾಡುವ ಅಧಿಕಾರವನ್ನು ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆ ಇವರಿಗೆ ನೀಡಲಾಗಿದೆ. ಸದರಿ ಬಾಬ್ತನ್ನು ಲೆಕ್ಕ ಶೀರ್ಷಿಕೆ: "2052 – ಸಚಿವಾಲಯ ಸಾಮಾನ್ಯ ಸೇವೆಗಳು–00–090–0–08 (100 ಧನಸಹಾಯ /ಪರಿಹಾರದಡಿಯಲ್ಲಿ) ಅಸ್ವಾಭಾವಿಕವಾಗಿ ಮರಣ ಹೊಂದಿದ್ದು, ಶಾಸಕರು ಮತ್ತು ಸಂಸತ್ ಸದಸ್ಯರ ಕುಟುಂಬಕ್ಕೆ ಪರಿಹಾರ" ದಡಿಯಲ್ಲಿ ಭರಿಸಲು ಆದೇಶಿಸಲಾಗಿದೆ.

ಓದಲಾದ (2)ರ ಸರ್ಕಾರಿ ಆದೇಶದಲ್ಲಿ ವಿಧಾನ ಸಭೆ ಸದಸ್ಯರಾಗಿದ್ದ ದಿವಂಗತ॥ ಸಿದ್ದಪ್ಪ ನ್ಯಾಮಗೌಡ, ಜಮಖಂಡಿ, ಇವರು ಅಸ್ವಾಭಾವಿಕವಾಗಿ ದಿ: 28.05.2018ರಂದು ಅಪಘಾತದಲ್ಲಿ ಮರಣ ಹೊಂದಿದ್ದರಿಂದ, ಅವರ ಪತ್ನಿ ಶ್ರೀಮತಿ ಸುಮಿತ್ರ ಸಿದ್ದು ನ್ಯಾಮಗೌಡ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ, ಇವರಿಗೆ ರೂ.5.00 ಲಕ್ಷಗಳ ಪರಿಹಾರಧನವನ್ನು ಮಂಜೂರು ಮಾಡಲು ಆದೇಶಿಸಲಾಗಿದೆ.

ಆದ್ದರಿಂದ ಈ ಆದೇಶ:–

**ಸರ್ಕಾರಿ ಆದೇಶ ಸಂಖ್ಯೆ: ಸಂವ್ಯಶಾಇ 07 ಸಂವ್ಯವಿ 2018, ದಿನಾಂಕ: 01.12.2018**

ವಿಧಾನ ಸಭೆ ಸದಸ್ಯರಾಗಿದ್ದ ದಿವಂಗತ॥ ಸಿದ್ದಪ್ಪ ನ್ಯಾಮಗೌಡ, ಜಮಖಂಡಿ, ಇವರು ಅಸ್ವಾಭಾವಿಕವಾಗಿ ದಿ: 28.05.2018ರಂದು ಅಪಘಾತದಲ್ಲಿ ಮರಣ ಹೊಂದಿದ್ದರಿಂದ, ಅವರ ಪತ್ನಿ ಶ್ರೀಮತಿ ಸುಮಿತ್ರ ಸಿದ್ದು ನ್ಯಾಮಗೌಡ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ, ಇವರಿಗೆ ರೂ.5.00 ಲಕ್ಷಗಳ ಪರಿಹಾರಧನವನ್ನು ಮಂಜೂರು ಮಾಡಲಾಗಿದೆ.

ಸದರಿ ವೆಚ್ಚವನ್ನು ಲೆಕ್ಕಶೀರ್ಷಿಕೆ "2052 ಸಚಿವಾಲಯ ಸಾಮಾನ್ಯ ಸೇವೆಗಳು–00–090–0–08ರಲ್ಲಿ ಅಸ್ವಾಭಾವಿಕವಾಗಿ ಅಸುನೀಗಿದ ಶಾಸಕರ ಮತ್ತು ಸಂಸದೀಯರ ಕುಟುಂಬಗಳಿಗೆ ಪರಿಹಾರ–100– ಧನಸಹಾಯ/ಪರಿಹಾರ" ರಡಿಯಲ್ಲಿ ಭರಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 611 ವೆಚ್ಚ 10/2018, ದಿನಾಂಕ: 29.10.2018ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಕೆ. ದ್ವಾರಕನಾಥ್ ಬಾಬು**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: